# “ರಾಷ್ಟ್ರೀಯ ಹಸಿರು ಪಡೆ” (ರಾ ಹ ಪ)

2001ರಲ್ಲಿ ಆರಂಭಗೊಂಡ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ (MoEF&CC) ರಾಷ್ಟ್ರೀಯ ಶಾಲಾ ಕಾರ್ಯಕ್ರಮವಾಗಿದೆ. ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಪರಿಸರದ ರಕ್ಷಣೆ ಮತ್ತು ಸುಧಾರಣೆಗೆ ಕ್ರಿಯಾಧಾರಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಾಷ್ಟ್ರಾದ್ಯಂತ ಶಾಲೆಗಳಲ್ಲಿ ಪರಿಸರ ಕೂಟಗಳನ್ನು ಸ್ಥಾಪಿಸುವ ಮೂಲಕ “ರಾಷ್ಟ್ರೀಯ ಹಸಿರು ಸೈನ್ಯ” ವನ್ನು ಸ್ಥಾಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಪನಿನೀಸಂಸಂ)ಯು 2009ರ ಜನವರಿಯಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕರ್ನಾಟಕದ ರಾಷ್ಟ್ರೀಯ ಹಸಿರು ಪಡೆಯ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

2019–20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಲ್ಲಿ 14,132 ಪರಿಸರ ಕೂಟದ ಶಾಲೆಗಳು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಹಣಕಾಸಿನ ಅನುದಾನವನ್ನು ಪಡೆದಿವೆ.

**ರಾ.ಹ.ಪ ಕಾರ್ಯಕ್ರಮದಡಿ ಪರಿಸರ ಕೂಟ ಶಾಲೆಗಳ ಸಂಖ್ಯೆ.**

| ಕ್ರ. ಸಂ | ಶಾಲೆಯ ವರ್ಗ | ರಚಿಸಲಾದ ಪರಿಸರ ಕೂಟಗಳ ಸಂಖ್ಯೆ |
|---|---|---|
| 1 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು | 6587 |
| 2 | ಸರ್ಕಾರಿ ಪ್ರೌಢ ಶಾಲೆಗಳು | 4464 |
| 3 | ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳು | 188 |
| 4 | ಅನುದಾನಿತ ಪ್ರೌಢ ಶಾಲೆಗಳು | 2868 |
| 5 | ಖಾಸಗಿ ಶಾಲೆಗಳು | 25 |
| | **ಒಟ್ಟು** | **14,132** |

## 1. 2019–20ರ ಅವಧಿಯಲ್ಲಿ ರಾ.ಹ.ಪ ಕಾರ್ಯಕ್ರಮಗಳು

2019–20 ನೇ ಹಣಕಾಸಿನ ಸಾಲಿನಲ್ಲಿ ಪರಿಸರ, ಶಿಕ್ಷಣ ಮತ್ತು ತರಬೇತಿ (ಇಇಎಟಿ) ಯೋಜನೆಯಡಿ ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಕರ್ನಾಟಕದಲ್ಲಿ ಪರಿಸರ ಶಿಕ್ಷಣ ಮತ್ತು ತರಬೇತಿ ಯೋಜನೆಯನ್ನು ಬೆಂಬಲಿಸಲು ರೂ 7,86,61,000/- ಅನುದಾನವನ್ನು ಮಂಜೂರು ಮಾಡಿದೆ. 2019–20ನೇ ಹಣಕಾಸಿನ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು 2019–20ನೇ ಸಾಲಿನಲ್ಲಿ ಮಂಜೂರು ಮಾಡಿದ ಮೊದಲನೇ ಕಂತು ಹಾಗು 2018–19 ನೇ ಹಣಕಾಸು ವರ್ಷದ ಆಡಳಿತಾತ್ಮಕ ವೆಚ್ಚವನ್ನು ಸೇರಿಸಿ ರೂ 7,28,54,260/- ಅನ್ನು ಬಿಡುಗಡೆ ಮಾಡಿದೆ. ಪ್ರತೀ ಪರಿಸರ ಕೂಟಕ್ಕೆ 5000/- ರೂ ನಂತೆ ಪ್ರತಿ ಜಿಲ್ಲೆಯ 500 ಪರಿಸರ ಕೂಟಗಳಿಗೆ ಒಟ್ಟಾರೆಯಾಗಿ ಕರ್ನಾಟಕದಾದ್ಯಂತ 14,132 ಶಾಲೆಗಳ ಪರಿಸರ ಕೂಟಗಳಿಗೆ ಪರಿಸರಾತ್ಮಕ ಚಟುವಟಿಕೆಗಳನ್ನು ಬೆಂಬಲಿಸಲು ಮತ್ತು ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸಲು ಪ್ರತೀ ಜಿಲ್ಲೆಗೆ 25,000/- ರೂ ನಂತೆ 34 ಶೈಕ್ಷಣಿಕೆ ಜಿಲ್ಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದೆ.

## 2. ಪನಿನೀಸಂಸಂಯಲ್ಲಿ ವಿಶ್ವ ಪರಿಸರ ದಿನಾಚರಣೆ

- **ವಿಶ್ವ ಪರಿಸರ ದಿನಾಚರಣೆ 2019 ಧ್ಯೇಯ ವಾಕ್ಯ–ವಾಯುಮಾಲಿನ್ಯ :** ಪನಿನೀಸಂಸಂ ಯು ವಿಶ್ವ ಪರಿಸರ ದಿನಾಚರಣೆಯನ್ನು ಜೂನ್ 5 ರಂದು ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿದ್ದ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ ಮಳಿಗೆ ಸ್ಥಾಪಿಸುವ ಮೂಲಕ ಆಚರಿಸಿತು. ರಸ್ತೆ ಜಾಥಾ, ಸೈಕಲ್ ರ‍್ಯಾಲಿ ಗಳನ್ನು ಕಾರ್ಯಕ್ರಮದ ಅಂಗವಾಗಿ ಆಯೋಜಿಸಲಾಗಿತ್ತು. ಪನಿನೀಸಂಸಂ ಸಿಬ್ಬಂದಿವರ್ಗದವರು ಭಾಗಿಯಾಗಿದ್ದು ವಿವಿಧ ಸರ್ಕಾರಿ ಅಧಿಕಾರಿಗಳು ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಪರಿಸರದ ಕುರಿತು ಜಾಗೃತಿ ಮೂಡಿಸಿದರು. ಪರಿಸರ ಕುರಿತ ಮಕ್ಕಳ ಪುಸ್ತಕ ಹಾಗು ಕರಪತ್ರಗಳನ್ನು ವಿತರಿಸಲಾಯಿತು. ಪ್ಲಾಸ್ಟಿಕ್ ಮಾಲಿನ್ಯದಿಂದ ಉಂಟಾಗುವ ಹಾನಿಗಳ ಬಗೆಗೆ

ಅರಿವು ಮೂಡಿಸಲು ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು ಹಾಗು ಅದರ ಪರ್ಯಾಯ ವಸ್ತುಗಳನ್ನು ಮಳಿಗೆಯಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಈ ಕಾರ್ಯಕ್ರಮದ ಮೂಲಕ ಹೆಚ್ಚಿನ ಸಂಖ್ಯೆಯ ಜನರಲ್ಲಿ ಪರಿಸರ ಸಂರಕ್ಷಣೆಯ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ತೇಜಸ್ವಿ ಸೂರ್ಯ, ಸಂಸದರು ಹಾಗೂ ಕರ್ನಾಟಕದ ಇತರೆ ಸಚಿವರುಗಳು ಸೇರಿದಂತೆ 1000 ಕ್ಕೂ ಹೆಚ್ಚು ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

- 7 ಜೂನ್ 2019 ರಂದು ಪನಿನೀಸಂಸಂಯು ದೊರೆಸಾನಿ ಪಾಳ್ಯ ಹಾಗು ಸರ್ಕಾರಿ ಪ್ರೌಢಶಾಲೆ ಪುಟ್ಟೇನಹಳ್ಳಿಯಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಿತು. ವಿನಾಯಕ ನಗರದಿಂದ ಪುಟ್ಟೇನಹಳ್ಳಿಯವರೆಗೂ ಪನಿನೀಸಂಸಂ ಸಿಬ್ಬಂದಿ ವರ್ಗದವರು ಪರಿಸರ ಸಂರಕ್ಷಣೆ ಕುರಿತಾದ ಫಲಕಗಳನ್ನು ಪ್ರದರ್ಶಿಸಿ ಘೋಷಣೆಗಳೊಂದಿಗೆ ರಸ್ತೆ ಜಾಥಾ ನಡೆಸಿದರು. ವಾಯುಮಾಲಿನ್ಯದ ಕುರಿತಾದ ಬೀದಿ ನಾಟಕವನ್ನು ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಪನಿನೀಸಂಸಂ ಸಿಬ್ಬಂದಿ ವರ್ಗದವರು ವಿಶ್ವ ಪರಿಸರ ದಿನದ ಪ್ರಾಮುಖ್ಯತೆ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸುಮಾರು 1000 ಜನರು ಭಾಗಿಯಾಗಿದ್ದರು.

**3. ವಿಶ್ವ ಓಝೋನ್ ದಿನ:**

ದಿನಾಂಕ: 16-09-2019ರಂದು ಸರ್ಕಾರಿ ಪ್ರೌಢಶಾಲೆ, ಸಾರಕ್ಕಿ, ಜೆಪಿ ನಗರ, ಬೆಂಗಳೂರಿನಲ್ಲಿ ವಿಶ್ವ ಓಝೋನ್ ದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ನಾಗಪ್ಪ, ನಿವೃತ್ತ ಹಿರಿಯ ವೈಜ್ಞಾನಿಕ ಪರಿಸರ ಅಧಿಕಾರಿ ಮತ್ತು ಶ್ರೀ ಡಿ. ಆರ್. ಕುಮಾರಸ್ವಾಮಿ, ನಿವೃತ್ತ ಮುಖ್ಯ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ಶಾಲಾ ಮಕ್ಕಳಿಗೆ ಉಪನ್ಯಾಸ ನೀಡಿದರು ಮತ್ತು ಭೂಮಿಯಲ್ಲಿ ವಾಸಿಸುವ ಎಲ್ಲಾ ಜೀವಿಗಳನ್ನು ಸೂರ್ಯನಿಂದ ಬರುವ ಹಾನಿಕಾರಕ ನೇರಳಾತೀತ ಕಿರಣಗಳಿಂದ ರಕ್ಷಿಸುವ ಬಗ್ಗೆ ಮಾಹಿತಿ ನೀಡಿದರು. "ಓಝೋನ್ ಪದರ ರಕ್ಷಿಸಿ" ಎಂಬ ವಿಷಯದ ಕುರಿತು ಚಿತ್ರಕಲೆ, ಘೋಷಣಾ ವಾಕ್ಯ ಬರವಣಿಗೆ ಮತ್ತು ಪ್ರಬಂಧ ಸ್ಪರ್ಧೆ ನಡೆಸಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ 600ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

**4. ವಿಶ್ವ ಜೌಗು ಭೂಮಿ ದಿನ:**

ದಿನಾಂಕ: 01-02-2020ರಂದು ಸರ್ಕಾರಿ ಪ್ರೌಢ ಶಾಲೆ. ಅಗ್ರಹಾರ ದಾಸರಹಳ್ಳಿ. ಬೆಂಗಳೂರಿನಲ್ಲಿ ವಿಶ್ವ ಜೌಗು ಭೂಮಿ ದಿನವನ್ನು ಆಚರಿಸಲಾಯಿತು. ಕೇಂದ್ರಿಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿ, ಬೆಂಗಳೂರು ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಮತ್ತು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಪ್ರಾದೇಶಿಕ ಕಛೇರಿ ಬೆಂಗಳೂರು ಇವರು "ಜೌಗು ಭೂಮಿ ಪ್ರಾಮುಖ್ಯತೆ" ಕುರಿತು ಕರಪತ್ರಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದರ ಮೂಲಕ ಕಾರ್ಯಕ್ರಮವನ್ನು ಬೆಂಬಲಿಸಿದರು. "ನಮ್ಮ ಜೌಗು ಭೂಮಿಯನ್ನು ಉಳಿಸಿ" ವಿಷಯದ ಕುರಿತು ಶಾಲಾ ಮಕ್ಕಳಿಗೆ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು. ಪರಿಸರ ಸಂರಕ್ಷಣೆ ಕುರಿತು ನಾಟಕ, ನೃತ್ಯ ಮತ್ತು ಪರಿಸರ ಗೀತೆಗಳನ್ನು ಶಾಲಾ ಮಕ್ಕಳು ನಡೆಸಿದರು. ಶ್ರೀ ರಮೇಶ ಸಿ, ಯೋಜನಾ ಅಭಿವೃದ್ಧಿ ಅಧಿಕಾರಿ, ರಾಜ್ಯ ನೋಡಲ್ ಅಧಿಕಾರಿ, ರಾಷ್ಟ್ರೀಯ ಹಸಿರು ಪಡೆ, ಪನಿನೀಸಂಸಂ ಇವರು ಜೌಗು ಭೂಮಿಯ ಪ್ರಾಮುಖ್ಯತೆ ಕುರಿತು ಮಾತನಾಡಿದರು. ಸಾರ್ವಜನಿಕರೂ ಸೇರಿದಂತೆ ಸುಮಾರು 400ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

**5. ಸ್ವಚ್ಛತಾ ಕ್ರಿಯಾ ಯೋಜನೆ:**

ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸ್ವಚ್ಛತಾ ಕ್ರಿಯಾ ಯೋಜನೆ ಕಾರ್ಯಕ್ರಮವು ವಾಯುಮಾಲಿನ್ಯ, ಜಲಮಾಲಿನ್ಯ, ತ್ಯಾಜ್ಯ ನಿರ್ವಹಣೆ, ಪರಿಸರ ಸಂರಕ್ಷಣೆ ಕುರಿತಾದ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೇಳಿದಂತೆ ಸ್ವಚ್ಛ ಭಾರತದ ವ್ಯಾಖ್ಯಾನವನ್ನು ಸಮಗ್ರವಾಗಿ ಸಾಕ್ಷಾತ್ಕಾರಗೊಳಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಪನಿನೀಸಂಸಂಯು ಸ್ವಚ್ಛತಾ ಕ್ರಿಯಾ ಯೋಜನೆಯಡಿ ಆಯೋಜಿಸಿದ ಚಟುವಟಿಕೆಗಳನ್ನು ಅನುಬಂಧ 12 ರಲ್ಲಿ ಕೊಡಲಾಗಿದೆ.

**6. ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದಡಿಯಲ್ಲಿ ಸಾಧನೆಗಳು:**

- ಅತ್ಯುತ್ತಮ ಪರಿಸರಕೂಟ ರಾಷ್ಟ್ರೀಯ ಪ್ರಶಸ್ತಿ: ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಗದಗ ಜಿಲ್ಲೆಯ ಗೊಜನೂರಿನ ಸರ್ಕಾರಿ ಪ್ರೌಢ ಶಾಲೆಗೆ ರಾಷ್ಟ್ರ ಮಟ್ಟದಲ್ಲಿ ಅತ್ಯುತ್ತಮ ಪರಿಸರ ಕೂಟ ವಿಭಾಗದಲ್ಲಿ ಸಮಾಧಾನಕರ ಪ್ರಶಸ್ತಿ ದೊರೆತಿದೆ.
- ಪನಿನೀಸಂಸಂಯು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದಕ್ಕಾಗಿ ಪ್ರಶಂಸನಾ ಪತ್ರವನ್ನು ಪಡೆದಿದೆ.

- ರಾಷ್ಟ್ರೀಯ ಹಸಿರು ಪಡೆ ಕರ್ನಾಟಕ ಜಾಲತಾಣ: ಪನಿನೀಸಂಸಂಯು ರಾಷ್ಟ್ರೀಯ ಹಸಿರು ಪಡೆ, ಕರ್ನಾಟಕ ಜಾಲತಾಣ https://ngc.karnataka.gov.in/ವನ್ನು ಡಿಸೆಂಬರ್ 2019ರಲ್ಲಿ ಬಿಡುಗಡೆ ಮಾಡಿತು. ಸೆಂಟರ್ ಫಾರ್ ಇ–ಗವರ್ನೆನ್ಸ್ ಸಂಸ್ಥೆಯು ರಾಷ್ಟ್ರೀಯ ಹಸಿರು ಪಡೆ ಜಾಲತಾಣವನ್ನು ಅಭಿವೃದ್ಧಿ ಪಡಿಸಿದೆ. ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ಜಿಲ್ಲಾ ಹಾಗು ಶಾಲಾ ಮಟ್ಟದಲ್ಲಿ ಉತ್ತಮವಾಗಿ ಅನುಷ್ಠಾನಗೊಳಿಸಲು ಸಹಕಾರಿಯಾಗುವಂತೆ ಸರಳವಾಗಿರುವ ತಂತ್ರಾಂಶವನ್ನು ರಚಿಸಲಾಗಿದೆ. ಶಾಲೆಗಳು ಉಪಯೋಗಿತಾ ಪ್ರಮಾಣ ಪತ್ರ ಹಾಗು ವಾರ್ಷಿಕ ವರದಿಗಳನ್ನು ಜಾಲತಾಣದಲ್ಲಿ ಅಪ್ಲೋಡ್ ಮಾಡಬಹುದಾಗಿದೆ.
- ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಫೇಸ್‌ಬುಕ್ ಖಾತೆ ngckarnataka ಹಾಗು ಫೇಸ್‌ಬುಕ್ ಪುಟ national green corps Karnataka ಅನ್ನು ತೆರೆಯಲಾಗಿದೆ
- ರಾಷ್ಟ್ರೀಯ ಹಸಿರು ಪಡೆ ಟ್ವಿಟರ್ ಖಾತೆಯನ್ನು ತೆರದಿದೆ : NGCkarnataka201

7. **ಕಡಲ ತೀರಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳು:**
   - ಕರ್ನಾಟಕದ 6 ಕಡಲ ತೀರಗಳಲ್ಲಿ 7 ದಿನಗಳ ಕಾಲ "ಸ್ವಚ್ಛ ನಿರ್ಮಲ ತಟ ಅಭಿಯಾನ" ಕಾರ್ಯಕ್ರಮದ ಅಡಿಯಲ್ಲಿ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸಮಗ್ರ ಕರಾವಳಿ ನಿರ್ವಹಣೆಯ ಸಹಯೋಗದೊಂದಿಗೆ ಪನಿನೀಸಂಸಂಯು ಸಾಮೂಹಿಕ ಸ್ವಚ್ಛತೆ ಜಾಗೃತಿ ಅಭಿಯಾನವನ್ನು ಆಯೋಜಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಬೆಂಗ್ರೆ ಕಡಲ ತೀರ, ಉಡುಪಿ ಜಿಲ್ಲೆಯ ಹೆಜಮಾಡಿ ಕಡಲ ತೀರ, ಉತ್ತರಕನ್ನಡ ಜಿಲ್ಲೆಯ ರವೀಂದ್ರನಾಥ್ ಟ್ಯಾಗೊರ್, ಅಪ್ಸರಕೊಂಡ, ಗೋಕರ್ಣ ಮತ್ತು ನೀರ್ವಾಣ ಕಡಲ ತೀರಗಳಲ್ಲಿ ದಿನಾಂಕ 11–11–2019 ರಿಂದ 18–11–2019 ರವರೆಗೆ ಸ್ವಚ್ಛತಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಶಿಕ್ಷಣ ಇಲಾಖೆ, ಜಿಲ್ಲಾ ಅಧಿಕಾರಿಗಳು, ಸ್ವಯಂ ಸೇವಾ ಸಂಘಗಳು, ಸ್ವಯಂ ಸೇವಕರು, ಸ್ಥಳೀಯ ಪಂಚಾಯತಿಗಳು, ಸರ್ಕಾರಿ, ಖಾಸಗಿ ಮತ್ತು ಅರೇ ಸರ್ಕಾರಿ ಸಂಸ್ಥೆಗಳು, ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳ ಸಹಯೋಗದೊಂದಿಗೆ ಕಡಲ ತೀರದ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಪರಿಸರ ಕೂಟದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ತ್ಯಾಜ್ಯ ನಿರ್ವಹಣಾ ನಿಯಮಗಳ ಪ್ರಕಾರ ಸ್ವಚ್ಛತಾ ಕಾರ್ಯಕ್ರಮದಡಿಯಲ್ಲಿ ಸಂಗ್ರಹಿಸಿದ ತ್ಯಾಜ್ಯವನ್ನು ವಿಲೇವಾರಿ ಮಾಡಲಾಯಿತು. 10000 ಕ್ಕೂ ಹೆಚ್ಚು ಮಂದಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.
   - **ಕರಾವಳಿ ಕಡಲ ತೀರಗಳಲ್ಲಿ ಪರಿಸರ ಶಿಕ್ಷಣದ ಕಾರ್ಯಕ್ರಮಗಳು:** ಸುಸ್ಥಿರ ಪ್ರವಾಸೋದ್ಯಮ ಮತ್ತು ಆರೋಗ್ಯಕರ ಕರಾವಳಿ ನಿರ್ವಹಣೆಯನ್ನು ಯೋಜಿಸಲು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಸಮಗ್ರ ಕರಾವಳಿ ನಿರ್ವಹಣಾ ಯೋಜನೆಯನ್ನು ರೂಪಿಸಿದೆ. ಕಡಲ ನಿರ್ವಹಣಾ ಸೇವೆಗಳು ಕಡಲ ತೀರದ ಮಾಲಿನ್ಯಗಳನ್ನು ಕಡಿಮೆ ಮಾಡಿ ಭಾರತದಲ್ಲಿ ಅಂತರಾಷ್ಟ್ರೀಯ ಮಟ್ಟದ ಮಾನದಂಡಗಳನ್ನು ಸಾಧಿಸುವುದಾಗಿದೆ. ಈ ಗುರಿಯನ್ನು ಸಾಧಿಸಲು 2020 ರ ಫೆಬ್ರುವರಿ 10 ಮತ್ತು 20 ರಂದು ಪಡುಬಿದ್ರೆ ಮತ್ತು ಕಾಸರಗೋಡು ಕಡಲ ತೀರಗಳಲ್ಲಿ ಪರಿಸರ ಶಿಕ್ಷಣ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕಡಲ ತೀರಗಳಲ್ಲಿ ಸ್ವಚ್ಛತೆ, ಘನ ತ್ಯಾಜ್ಯ ನಿರ್ವಹಣೆ ಸೇರಿದಂತೆ ಪರಿಸರ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಲು ಪರಿಸರ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲಾಯಿತು. ಕಾರ್ಯಕ್ರಮಗಳ ಭಾಗವಾಗಿ ಪರಿಸರ ಕೂಟದ ಶಾಲೆಯ ಮಕ್ಕಳು ಜಾಥಾಗಳಲ್ಲಿ ಭಾಗವಹಿಸಿ ಕಡಲ ತೀರಗಳನ್ನು ಉಳಿಸುವ ಕುರಿತು ಘೋಷಣೆಗಳನ್ನು ಕೂಗಿದರು. "ನಮ್ಮ ಕಡಲ ತೀರಗಳನ್ನು ಉಳಿಸಿ" ಎಂಬ ವಿಷಯದ ಮೇಲೆ ಚಿತ್ರಕಲೆ ಮತ್ತು ರಸಪ್ರಶ್ನೆ ಸ್ಪರ್ಧೆಗಳನ್ನು ಮಕ್ಕಳಿಗೆ ಆಯೋಜಿಸಲಾಗಿತ್ತು. ಪ್ರವಾಸೊದ್ಯಮ ಇಲಾಖೆ, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ, ಸ್ವಯಂ ಸೇವಕರು, ಶಿಕ್ಷಕರು, ಪ್ರವಾಸಿಗರು, ಸ್ಥಳೀಯ ಸಮುದಾಯಗಳು, ಬೀಮ್ಸ್ (ಬೀಚ್ ಎನ್ವಿರಾನ್ಮೆಂಟ್ ಅಂಡ್ ಏಸ್ತೆಟಿಕ್ ಮ್ಯಾನೇಜ್ಮೆಂಟ್ ಸಿಸ್ಟಮ್) ಸೇವಾ ಸಿಬ್ಬಂದಿ, ಶಾಲಾ ಮಕ್ಕಳು ಮತ್ತು ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿದ್ದರು. ಅಧಿಕಾರಿಗಳು ಮತ್ತು ತಜ್ಞರು ಸಾಗರ ಜೈವಿಕ ವಿಜ್ಞಾನ, ಸಮುದ್ರ ಮಾಲಿನ್ಯ ಮತ್ತು ಸಮುದ್ರ ಪ್ರಾಣಿಗಳ ಮೇಲೆ ಪ್ಲಾಸ್ಟಿಕ್ ಮಾಲಿನ್ಯದ ಪರಿಣಾಮಗಳ ಕುರಿತು ಭಾಷಣ ಮಾಡಿದರು. ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಸುಮಾರು 2000 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

8. **ರಾಷ್ಟೀಯ ಹಸಿರು ಪಡೆ ಕಾರ್ಯಕ್ರಮದಡಿಯ ತರಬೇತಿ ಕಾರ್ಯಕ್ರಮಗಳು:** ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದಡಿಯಲ್ಲಿ ಪರಿಸರ ಕುರಿತಂತೆ ಜಾಗೃತಿ ಮೂಡಿಸಲು ಹಾಗು ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮವನ್ನು ಉತ್ತಮವಾಗಿ ಅನುಷ್ಠಾನಗೊಳಿಸಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಪ್ರಮುಖ ತರಬೇತಿಗಳೆಂದರೆ ಪರಿಸರ ಕೂಟದ ಉಸ್ತುವಾರಿ ಶಿಕ್ಷಕರಿಗೆ ಉಪಗ್ರಹಾಧರಿತ ತರಬೇತಿ, ರಾಷ್ಟ್ರೀಯ ಹಸಿರು ಪಡೆಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ

ಕಾರ್ಯಾಗಾರ, ಜಿಲ್ಲಾ ಕಾರ್ಯಕ್ರಮ ಸಹಸಹಾಯಕರಿಗೆ ತರಬೇತಿ ಹಾಗು ಪರಿಸರಕೂಟದ ಶಿಕ್ಷಕರಿಗೆ 34 ಶೈಕ್ಷಣಿಕ ಜಿಲ್ಲೆಗಳಲ್ಲಿ 68 ತರಬೇತಿ ಕಾರ್ಯಕ್ರಮಗಳು. ತರಬೇತಿಗಳ ವಿವರಗಳನ್ನು **ಅನುಬಂಧ 13** ರಲ್ಲಿ ನೀಡಲಾಗಿದೆ.

9. **ಪರಿಸರಕೂಟ ಶಾಲೆಗಳಿಗೆ ರಾಷ್ಟ್ರೀಯ ಹಸಿರು ಪಡೆ ತಂಡದ ಭೇಟಿ:** ಪನಿನೀಸಂಸಂಯ ರಾಷ್ಟ್ರೀಯ ಹಸಿರು ಪಡೆ ತಂಡವು ಮತ್ತು ಆಯಾ ಜಿಲ್ಲೆಯ ಜಿಲ್ಲಾ ಕಾರ್ಯಕ್ರಮ ಸಹಸಹಾಯಕರು 2019–20ನೇ ಸಾಲಿನಲ್ಲಿ 3696 ಪರಿಸರಕೂಟ ಶಾಲೆಗಳಿಗೆ ಭೇಟಿ ನೀಡಿದ್ದು, ಶಾಲಾ ಭೇಟಿಯ ವಿವರಗಳನ್ನು **ಅನುಬಂಧ 15** ರಲ್ಲಿ ನೀಡಲಾಗಿದೆ.

10. **2019–20 ನೇ ಸಾಲಿನಲ್ಲಿ ಪರಿಸರಕೂಟಗಳಲ್ಲಿ ನಡೆಸಲಾದ ಪ್ರಮುಖ ಚಟುವಟಿಕೆಗಳು:** ಜಿಲ್ಲಾ ಕಾರ್ಯಕ್ರಮ ಸಹಸಹಾಯಕರು ಆಯಾ ಜಿಲ್ಲೆಗಳಲ್ಲಿ 2019–20 ನೇ ಸಾಲಿನಲ್ಲಿ ಶಾಲೆಗಳಲ್ಲಿ ಕೈಗೊಳ್ಳಲಾದ ಪರಿಸರಕೂಟ ಚಟುವಟಿಕೆಗಳ ಕುರಿತ ಮಾಹಿತಿ ಸಂಗ್ರಹಿಸಿದ್ದಾರೆ. ಜಿಲ್ಲಾ ಕಾರ್ಯಕ್ರಮ ಸಹಸಹಾಯಕರ ಶಾಲಾ ಭೇಟಿಯ ವರದಿಯನ್ನಾಧರಿಸಿ ಪರಿಸರಕೂಟ ಶಾಲೆಗಳಲ್ಲಿ ಕೈಗೊಳ್ಳಲಾದ ಚಟುವಟಿಕೆಗಳನ್ನು **ಅನುಬಂಧ 16** ರಲ್ಲಿ ನೀಡಲಾಗಿದೆ.

11. **ಫೋಟೊ ಗ್ಯಾಲರಿ :**



ವಿಶ್ವ ಪರಿಸರ ದಿನಾಚರಣೆ, ಚೌಡಯ್ಯ ಮೆಮೊರಿಯಲ್ ಹಾಲ್, ಬೆಂಗಳೂರು




ವಿಶ್ವ ಪರಿಸರ ದಿನಾಚರಣೆ, ಸರ್ಕಾರಿ ಪ್ರೌಢ ಶಾಲೆ, ಪುಟ್ಟೇನಹಳ್ಳಿ




ವಿಶ್ವ ಓಝೋನ್ ದಿನಾಚರಣೆ, ಸರ್ಕಾರಿ ಪ್ರೌಢಶಾಲೆ, ಸಾರಕ್ಕಿ




ವಿಶ್ವ ಜೌಗುಭೂಮಿ ದಿನಾಚರಣೆ, ಸರ್ಕಾರಿ ಪ್ರೌಢ ಶಾಲೆ, ಅಗ್ರಹಾರ ದಾಸರಹಳ್ಳಿ



ಕಛೇರಿ ಪ್ರಾಂಗಣ ಸ್ವಚ್ಛತೆಯಲ್ಲಿ ತೊಡಗಿರುವ ಸಿಬ್ಬಂದಿ



ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತಾ ಪಕ್ವಾಡ ಜಾಗೃತಿ ಅಭಿಯಾನ



ಬಿಸ್ಲೆರಿ ಇಂಟರ್ ನ್ಯಾಷನಲ್ ಲಿಮಿಟೆಡ್‌ನಲ್ಲಿ ಪರಿಸರ ದಿನಾಚರಣೆ




ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತಾ ಪಕ್ವಾಡದ ಜಾಗೃತಿ



ಕನ್ನಮಂಗಲ ಕೆರೆ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪನಿನೀಸಂಸಂ ಸಿಬ್ಬಂದಿ, ಶಾಲಾ ಮಕ್ಕಳು ಹಾಗು ಬಿಸ್ಲೆರಿ ಇಂಟರ್ ನ್ಯಾಷನಲ್‌ನ ಸಿಬ್ಬಂದಿ



ಸಿಆರ್‌ಪಿಎಫ್‌ನ ಶ್ವಾನತಳಿ ಸಂವರ್ಧನಾ ಶಿಬಿರದಲ್ಲಿ ಗಿಡ ನೆಡುವ ಕಾರ್ಯಕ್ರಮ



ಪನಿನೀಸಂಸಂ ಕಛೇರಿ ಆವರಣದಲ್ಲಿ ಗಿಡ ನೆಡುವ ಕಾರ್ಯಕಮ



ದಿನಪತ್ರಿಕೆಗಳ ಮುಖಾಂತರ ಕಸವು ಕಸದ ಬುಟ್ಟಿಗೆ ಅಭಿಯಾನದ ಕರಪತ್ರ ವಿತರಣೆ



ಸೆಕ್ರೆಡ್ ಹಾರ್ಟ್ ಬಾಲಕಿಯರ ಪ್ರೌಢಶಾಲೆ, ಬೆಂಗಳೂರಿನಲ್ಲಿ ಕಸವಿರೋಧಿ ಅಭಿಯಾನ ಹಾಗು ಪ್ಲಾಸ್ಟಿಕ್ ನಿಷೇಧ ಕುರಿತ ಜಾಗೃತಿ ಕಾರ್ಯಕ್ರಮ




ದಸರಾ ವಸ್ತು ಪ್ರದರ್ಶನ ಮಳಿಗೆ, ಮೈಸೂರು




ಕಾವೇರಿ ನದಿ ತೀರ ಸ್ವಚ್ಛತಾ ಕಾರ್ಯಕ್ರಮ




ಸ್ವಚ್ಛ ಮತ್ತು ಸ್ವಾಸ್ಥ ಭಾರತಕ್ಕಾಗಿ ಸ್ವಚ್ಛ ಹವಾ ಕಾರ್ಯಕ್ರಮ



ಕಡಲ ತೀರದ ಸ್ವಚ್ಛತಾ ಕಾರ್ಯಕ್ರಮ



ಕಡಲ ತೀರದಲ್ಲಿ ಪರಿಸರ ಶಿಕ್ಷಣ ಹಾಗು ಜಾಗೃತಿ ಕಾರ್ಯಕ್ರಮ




ಗುಜರಾತ್ ರಾಜ್ಯದ ಕೆವಡಿಯಾದಲ್ಲಿ ಪನಿನೀಸಂಸಂಗೆ ಪ್ರಶಂಸನಾ ಪತ್ರ ಪ್ರಧಾನ




ಗದಗ ಜಿಲ್ಲೆಯ ಗೊಜನೂರಿನ ಸರ್ಕಾರಿ ಪ್ರೌಢಶಾಲೆಗೆ ಅತ್ಯುತ್ತಮ ಪರಿಸರಕೂಟ ವಿಭಾಗದಲ್ಲಿ ಪ್ರಶಸ್ತಿ ಪ್ರಧಾನ



ಡಿಎಸ್ಇಆರ್‌ಟಿ ಯಲ್ಲಿ ಉಪಗ್ರಹ ಸಂವಹನ ತರಬೇತಿ ಕಾರ್ಯಕ್ರಮ




ರಾ.ಹ.ಪ ಜಿಲ್ಲಾ ನೋಡಲ್ ಅಧಿಕಾರಿಗಳ ತರಬೇತಿ ಕಾರ್ಯಕ್ರಮ

**ಅನುಬಂಧ 12: 2019–20ನೇ ಸಾಲಿನಲ್ಲಿ ಪನಿನೀಸಂಸಂ ಸಂಸ್ಥೆಯು ಕೈಗೊಂಡ ಸ್ವಚ್ಛತಾ ಕ್ರಿಯಾ ಯೋಜನೆಯ ಕಾರ್ಯಕ್ರಮಗಳು**

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದ ಅಭ್ಯರ್ಥಿಗಳು | ಅಭ್ಯರ್ಥಿಗಳ ಸಂಖ್ಯೆ | ಸ್ಥಳ | ವಿವರ |
|---|---|---|---|---|---|---|
| 1 | 01/06/2019 | ಕಛೇರಿ ಆವರಣ ಸ್ವಚ್ಛತಾ ಕಾರ್ಯಕ್ರಮ | ಪನಿನೀಸಂಸಂ ಸಿಬ್ಬಂದಿ | 50+ | ಪನಿನೀಸಂಸಂ ಬೆಂಗಳೂರು | ದೂರೆಸಾನಿಪಾಳ್ಯದ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಆವರಣದ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಹಳೆ ಕಾಗದ ಹಾಗು ಪ್ಲಾಸ್ಟಿಕ್ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಯಿತು. |
| 2 | 03/06/2019 | ಸಾರ್ವಜನಿಕ ಉದ್ಯಾನವನ ರಸ್ತೆ ಹಾಗು ಮಾರಕಟ್ಟೆಗಳಲ್ಲಿ ಸ್ವಚ್ಛತಾ/ ಜಾಗೃತಿ ಕಾರ್ಯಕ್ರಮಗಳು | ಪನಿನೀಸಂಸಂ ಸಿಬ್ಬಂದಿ ಹಾಗು ಸಾರ್ವಜನಿಕರು | 200+ | ಬೆಂಗಳೂರಿನ ವಿಧಾನ ಸೌಧ, ವಿಕಾಸ ಸೌಧ, ಹೈಕೋರ್ಟ್, ಕಬ್ಬನ್ ಪಾರ್ಕ್ ಮತ್ತು ಲಾಲ್ ಭಾಗ್ | ಪನಿನೀಸಂಸಂಯ ರಾ.ಹ.ಪ ಸಿಬ್ಬಂದಿಯು ಬೆಂಗಳೂರಿನ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಜಾಗೃತಿ ಮೂಡಿಸಿದರು ಹಾಗು ಸಾರ್ವಜನಿಕರ ಸಹಭಾಗಿತ್ವದಲ್ಲಿ ಸ್ವಚ್ಛತೆ ಕುರಿತು ಪ್ರಚಾರ ಮಾಡಲಾಯಿತು. |
| 3 | 04/06/2019 | ವಾಯುಮಾಲಿನ್ಯ ಕುರಿತು ಜಾಗೃತಿ | ಶಾಲಾಮಕ್ಕಳು ಶಿಕ್ಷಕರು, ಸಾರ್ವಜನಿಕರು ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಿಸ್ಲೆರಿ ಮತ್ತು ಇಂಡೋ ಟಿಬೆಟಿಯನ್ ಬಾರ್ಡರ್ ಪೊಲಿಸ್ (ಐಟಿಬಿಪಿ) ಸಿಬ್ಬಂದಿ | 200+ | ಬಿಸ್ಲೆರಿ ಇಂಟರ್ ನ್ಯಾಷನಲ್ ಬೆಂಗಳೂರು | ಪನಿನೀಸಂಸಂ ಸಿಬ್ಬಂದಿಯು ವಾಯುಮಾಲಿನ್ಯದಿಂದಾಗುವ ಪರಿಣಾಮಗಳು ಹಾಗು ಅದರ ನಿಯಂತ್ರಣ ಕ್ರಮಗಳ ಕುರಿತು ಮಾತನಾಡಿದರು. ಪ್ಲಾಸ್ಟಿಕ್ ಮಾಲಿನ್ಯ ಮತ್ತು ಅದರ ದುಷ್ಪರಿಣಾಮಗಳ ಕುರಿತ ಚರ್ಚೆಯನ್ನೂ ಆಯೋಜಿಸಲಾಗಿತ್ತು. ಪ್ಲಾಸ್ಟಿಕ್ ಹಾಗು ವಾಯುಮಾಲಿನ್ಯ ಕುರಿತ ಕರಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. |
| 4 | 04/06/2019 | ಇಂಡೋ ಟಿಬೆಟಿಯನ್ ಬಾರ್ಡರ್ ಪೋಲಿಸ್ ಕಛೇರಿಯಲ್ಲಿ ವಾಯು ಮಾಲಿನ್ಯ ಕುರಿತು ಜಾಗೃತಿ | ಇಂಡೋ ಟಿಬೆಟಿಯನ್ ಬಾರ್ಡರ್ ಪೋಲಿಸ್ ಸಿಬ್ಬಂದಿ (ಐಟಿಬಿಪಿ) | 50+ | ಐಟಿಬಿಪಿ | ಐಟಿಬಿಪಿ ಸಿಬ್ಬಂದಿ ವರ್ಗದವರಿಗೆ ರಾ.ಹ.ಪ ಸಿಬ್ಬಂದಿಯು ವಾಯುಮಾಲಿನ್ಯದ ದುಷ್ಪರಿಣಾಮದ ಕುರಿತ ಪ್ರಾತ್ಯಕ್ಷಿಕೆ ನೀಡಿದರು. |

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದ ಅಭ್ಯರ್ಥಿಗಳು | ಅಭ್ಯರ್ಥಿಗಳ ಸಂಖ್ಯೆ | ಸ್ಥಳ | ವಿವರ |
|---|---|---|---|---|---|---|
| 5 | 12/06/2019 | ಕನ್ನಮಂಗಲ ಕೆರೆಯ ಸ್ವಚ್ಛತಾ ಕಾರ್ಯಕ್ರಮ | ಶಾಲಾ ಮಕ್ಕಳು ಸಾರ್ವಜನಿಕರು ಮತ್ತು ವಿವಿಧ ಸಂಸ್ಥೆಗಳ ಸಿಬ್ಬಂದಿ | 100+ | ಕನ್ನಮಂಗಲ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು | ಕೆರೆ ಸ್ವಚ್ಛತಾ ಚಟುವಟಿಕೆಗಳನ್ನು ಆಯೋಜಿಸಿ ಕೆರೆ ಸುತ್ತಲಿನ ಪ್ರದೇಶದಲ್ಲಿನ ತ್ಯಾಜ್ಯ ಸಂಗ್ರಹಿಸಿ ವಿಂಗಡಿಸಿ ವಿಲೇವಾರಿಗಾಗಿ ಸ್ಥಳೀಯ ಸಂಸ್ಥೆಗೆ ನೀಡಲಾಯಿತು. ಪನಿನೀಸಂಸಂ ಸಿಬ್ಬಂದಿವರ್ಗದವರು ಶಾಲಾ ಮಕ್ಕಳನ್ನು ಕುರಿತು ಬೆಂಗಳೂರಿನ ಕೆರೆಗಳ ಪುನರುಜ್ಜೀವನದ ಮಹತ್ವದ ಕುರಿತು ಮಾತನಾಡಿದರು |
| 6 | 15/06/2019 | ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ವಚ್ಛ ಭಾರತ ಹಾಗು ಸ್ವಚ್ಛತಾ ರ್‍ಯಾಲಿಗಳ ಕುರಿತು ಪ್ರಬಂಧ ರಚನೆ ಸ್ಪರ್ಧೆ ಮತ್ತು ಬಯಲು ಶೌಚ ಮುಕ್ತ ಸಮುದಾಯದ ಕುರಿತು ಜಾಗೃತಿ | ಶಾಲಾ ಮಕ್ಕಳು, ಶಿಕ್ಷಕರು ಸಾರ್ವಜನಿಕರು ಹಾಗು ಪನಿನೀಸಂಸಂ ಸಿಬ್ಬಂದಿ | 1000+ | ಸರ್ಕಾರಿ ಪ್ರೌಢಶಾಲೆ ಮಲ್ಲಸಂದ್ರ, ಬೆಂಗಳೂರು. | ನೃತ್ಯ, ಸಮೂಹ ಗಾಯನ, ಕಿರು ನಾಟಕ ಸೇರಿದಂತೆ ಸ್ವಚ್ಛ ಭಾರತ ಅಭಿಯಾನ ಮತ್ತು ಪರಿಸರ ಸಂರಕ್ಷಣೆ ಉತ್ತೇಜಿಸುವ ಕಾರ್ಯಕ್ರಮಗಳು, ಸ್ವಚ್ಛ ಭಾರತ ಮತ್ತು ಸ್ವಚ್ಛತಾ ರ್‍ಯಾಲಿ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪನಿನೀಸಂಸಂ ಸಿಬ್ಬಂದಿಯು ಪ್ರಸಕ್ತ ಪರಿಸರ ಸಮಸ್ಯೆಗಳ ಕುರಿತು ಮಾತನಾಡಿದರು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಯಲು ಶೌಚ ಮುಕ್ತ ಸಮುದಾಯದ ಕುರಿತ ಸ್ವಚ್ಛತಾ ರ್‍ಯಾಲಿಯನ್ನು ಆಯೋಜಿಸಲಾಗಿತ್ತು. |
| 7 | ಜುಲೈ 2019 | ಪ್ಲಾಸ್ಟಿಕ್ ನಿಷೇಧ ಅನುಷ್ಠಾನದ ಸಮೀಕ್ಷೆ. | ಚಿಲ್ಲರೆ ವ್ಯಾಪಾರಿಗಳು ಸಗಟುದಾರರು, ಅಂಗಡಿ ಮಾಲಿಕರು ಹಾಗು ಬೀದಿ ಬದಿ ವ್ಯಾಪಾರಿಗಳು ಮತ್ತು ಸಾರ್ವಜನಿಕರು | 1000+ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳು | ಮಾರುಕಟ್ಟೆ, ಮಾಲ್‌ಗಳು, ಬೀದಿಬದಿ ವ್ಯಾಪಾರಿಗಳು, ಆಸ್ಪತ್ರೆ, ಮತ್ತು ದೇವಸ್ಥಾನಗಳಿಗೆ ಭೇಟಿ ನೀಡಿ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ 2016 ರ ಅನುಷ್ಠಾನದ ಸಮೀಕ್ಷೆ ಮಾಡಲಾಯಿತು. |
| 8 | 26/07/2019 27/07/2019 | ಗಿಡ ನೆಡುವ ಕಾರ್ಯಕ್ರಮ | ಕೇಂದ್ರ ಮೀಸಲು ಪಡೆಯ (ಸಿ ಆರ್ ಪಿ ಎಫ್) ಪಡೆಯ ಶ್ವಾನ ತಳಿ ಸಂವರ್ಧನಾ ಹಾಗು ತರಬೇತಿ ಸಂಸ್ಥೆ (ಡಿಬಿಟಿಎಸ್)ಸಿಬ್ಬಂದಿ | 200+ | ಕೇಂದ್ರಮೀಸಲು ಪಡೆಯ ಶ್ವಾನ ತಳಿ ಸಂವರ್ಧನಾ ಹಾಗು ತರಬೇತಿ ಸಂಸ್ಥೆ. | ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಸಿ ಆರ್ ಪಿ ಎಫ್ ನ ಜವಾನರಿಗೆ 100 ರಕ್ತಚಂದನ ಸಸಿಗಳನ್ನು ವಿತರಿಸಲಾಯಿತು. |

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದ ಅಭ್ಯರ್ಥಿಗಳು | ಅಭ್ಯರ್ಥಿಗಳ ಸಂಖ್ಯೆ | ಸ್ಥಳ | ವಿವರ |
|---|---|---|---|---|---|---|
| 9 | 29/07/2019 | ಪನಿನೀಸಂಸಂ ಕಛೇರಿ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ | ಪನಿನೀಸಂಸಂ ಸಿಬ್ಬಂದಿ | 75+ | ಪನಿನೀಸಂಸಂ ದೊರೆಸಾನಿ ಪಾಳ್ಯ ಅರಣ್ಯ ಪ್ರದೇಶ. ಬೆಂಗಳೂರು | ಪನಿನೀಸಂಸಂ ಕಛೇರಿ ಆವರಣದಲ್ಲಿ ವಿಶೇಷ ತಳಿಯ ಸಸಿಗಳನ್ನು ನೆಡುವುದರ ಮೂಲಕ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. |
| 10 | 1/08/2019 to 31/08/2019 | ಸಾರ್ವಜನಿಕರಿಗೆ ಕಸವು ಕಸದ ಬುಟ್ಟಿಗೆ ಅಭಿಯಾನ | ಸಾರ್ವಜನಿಕರು | 1000+ | ಸಾರ್ವಜನಿಕರು ಹಾಗು ನಿವಾಸಗಳು, ಬೆಂಗಳೂರು | ಘನತ್ಯಾಜ್ಯ ನಿರ್ವಹಣಾ ನಿಯಮಗಳು –2016 ರ ತ್ಯಾಜ್ಯ ಉತ್ಪಾದಕರ ಕರ್ತವ್ಯಗಳು “ಕರಪತ್ರಗಳನ್ನು ಮುದ್ರಿಸಲಾಯಿತು ಹಾಗು ಕರಪತ್ರಗಳನ್ನು ನಿವಾಸಿಗಳಿಗೆ ಹಾಗು ಸಾರ್ವಜನಿಕರಿಗೆ ದಿನಪತ್ರಿಕೆಗಳ ಮುಖಾಂತರ ವಿತರಿಸಲಾಯಿತು. |
| 11 | 27/08/2019 | ಸಾರ್ವಜನಿಕರಿಗೆ ಹಾಗು ನಿವಾಸಿಗಳಿಗೆ ಕಸವು ಕಸದ ಬುಟ್ಟಿಗೆ ಅಭಿಯಾನ | ಸಾರ್ವಜನಿಕರು, ಶಾಲಾ ಮಕ್ಕಳು ಮತ್ತು ಸರ್ಕಾರಿ ಅಧಿಕಾರಿಗಳು | 1000+ | ಸುಸ್ಥಿರ ಅಭಿವೃದ್ಧಿ ಗುರಿಗಳ ವಸ್ತು ಪ್ರದರ್ಶನ ಕಾರ್ಯಕ್ರಮ ಸ್ವಾತಂತ್ರ ಉದ್ಯಾನವನ, ಬೆಂಗಳೂರು | ವಸ್ತು ಪ್ರದರ್ಶನದಲ್ಲಿ ಮಳಿಗೆಯನ್ನು ತೆರೆದು ಹಲವು ಪರಿಸರ ಸಮಸ್ಯೆಗಳ ಕುರಿತಾದ ಭಿತ್ತಿ ಪತ್ರಗಳನ್ನು ಪ್ರದರ್ಶನಕ್ಕಿಡಲಾಯಿತು. ಇದರೊಂದಿಗೆ ಕರಪತ್ರ ಹಾಗು ಕೈಪಿಡಿಗಳನ್ನು ಸಾರ್ವಜನಿಕರಿಗೆ ವಿತರಿಸಲಾಯಿತು |
| 12 | 31/08/2019 | ಸ್ವಚ್ಛತೆಯೇ ಸೇವೆ ಕಾರ್ಯಕ್ರಮ | ಸಾರ್ವಜನಿಕರು | 200+ | ಡೆಕತ್ಲಾನ್ ಇವಾ ಮಾಲ್ ಬ್ರಿಗೆಡ್ ರಸ್ತೆ, ಬೆಂಗಳೂರು | ಜಾಗೃತಿ ರ‍್ಯಾಲಿಯಲ್ಲಿ ಪನಿನೀಸಂಸಂ ಸಿಬ್ಬಂದಿ ವರ್ಗದವರು ಪಾಲ್ಗೊಂಡು ತ್ಯಾಜ್ಯ ಉತ್ಪಾದಕರ ಕರ್ತವ್ಯಗಳ ಕುರಿತ ಕರಪತ್ರಗಳನ್ನು ಹಲಸೂರು ಕೆರೆ ಹಾಗು ಬ್ರಿಗೇಡ್ ರಸ್ತೆಗಳಲ್ಲಿನ ಸಾರ್ವಜನಿಕರಿಗೆ ವಿತರಿಸಿದರು. ಪರಿಸರ ಸ್ನೇಹಿ ಗಣೇಶ ಮೂರ್ತಿಯ ಕಾರ್ಯಾಗಾರವನ್ನು ಆಯೋಜಿಸಲಾಯಿತು. |
| 13 | 12/09/2019ರಿಂದ 14/09/2019ವರೆಗು | ವಸ್ತು ಪ್ರದರ್ಶನದಲ್ಲಿ ಸ್ವಚ್ಛತೆಯೇ ಸೇವೆ ಕಾರ್ಯಕ್ರಮ | ವಿವಿಧ ಸರ್ಕಾರಿ ಸಂಸ್ಥೆಗಳ ಅಧಿಕಾರಿಗಳು, ಶಾಲಾ ಮಕ್ಕಳು ಹಾಗು ಸಾರ್ವಜನಿಕರು. | 10000+ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯಿಂದ ಆಯೋಜಿಸಲಾಗಿದ್ದ “ನಿಷೇಧಿತ ಪ್ಲಾಸ್ಟಿಕ್ ಹಾಗು ಪರ್ಯಾಯವಾಗಿ ಉಪಯೋಗಿಸುವ ವಸ್ತುಗಳ ಪ್ರದರ್ಶನ ಕಾರ್ಯಕ್ರಮ. | ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು ಅದರ ಪರ್ಯಾಯ ವಸ್ತುಗಳು ಹಾಗು ವಿನಾಯಿತಿ ಇರುವ ಪ್ಲಾಸ್ಟಿಕ್ ವಸ್ತುಗಳನ್ನು ಪ್ರದರ್ಶಿಸಲಾಯಿತು. ತ್ಯಾಜ್ಯ ನಿರ್ವಹಣೆ ಕುರಿತ ವಿವಿಧ ಕರಪತ್ರಗಳನ್ನು, ವಾಯುಮಾಲಿನ್ಯ ಕುರಿತ ಪುಸ್ತಕಗಳು, ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಕರಪತ್ರ ಹಾಗು ಮಕ್ಕಳ ಕೆರೆ ಉಳಿಸಿ ಪುಸ್ತಕಗಳನ್ನು ವಿತರಿಸಲಾಯಿತು. ಹವಾಮಾನ ಬದಲಾವಣೆ ಸುಸ್ಥಿರ ಬೆಳವಣಿಗೆ ಹಾಗು ಇತರೆ ಪರಿಸರ ಸಂಬಂಧಿ ಚಲನ |

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದ ಅಭ್ಯರ್ಥಿಗಳು | ಅಭ್ಯರ್ಥಿಗಳ ಸಂಖ್ಯೆ | ಸ್ಥಳ | ವಿವರ |
|---|---|---|---|---|---|---|
| | | | | | | ಚಿತ್ರಗಳನ್ನು ಭಾಗವಹಿಸಿದವರಿಗೆ ಪ್ರದರ್ಶಿಸಲಾಯಿತು |
| 14 | 29/09/2019 ರಿಂದ 27/12/ 2019ವರೆಗು | ಮೈಸೂರು ದಸರಾ ವಸ್ತು ಪ್ರದರ್ಶನ | ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು | 6000+ | ಮೈಸೂರು ದಸರಾ ವಸ್ತು ಪ್ರದರ್ಶನ ಮೈದಾನ | ಮೈಸೂರು ದಸರಾದಲ್ಲಿ ಮಳಿಗೆಯನ್ನು ತೆರೆದು ಮೂರು ತಿಂಗಳುಗಳು ಸಾರ್ವಜನಿಕರ ಪ್ರದರ್ಶನಕ್ಕೆ ಅನುವುಮಾಡಿಕೊಡಲಾಗಿತ್ತು. ಪರಿಸರ ಕೂಟಗಳ ಚಟುವಟಿಕೆಗಳ ಹಾಗು ತ್ಯಾಜ್ಯ ನಿರ್ವಹಣೆಯ ಭಿತ್ತಿ ಪತ್ರಗಳು, ಹಸಿಕಸ–ಒಣ ಕಸ, ಇ-ತ್ಯಾಜ್ಯ, ಅಪಾಯಕಾರಿ ತ್ಯಾಜ್ಯಗಳ ಬಗೆಗಿನ ಅರಿವು ಮೂಡಿಸಲು ವಿವಿಧ ಕಸದ ಬುಟ್ಟಿಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ನಿಷೇಧಿತ ಪ್ಲಾಸ್ಟಿಕ್ ಹಾಗು ಅದರ ಪರ್ಯಾಯ ವಸ್ತುಗಳನ್ನು ಪ್ರದರ್ಶನಕ್ಕಿಡಲಾಯಿತು. ಪರಿಸರ ಸಂಬಂಧಿ ಕರಪತ್ರಗಳು ಹಾಗು ಕೈಪಿಡಿಗಳನ್ನು ವಿತರಿಸಲಾಯಿತು. |
| 15 | 11/10/2019 | ಕಸ ವಿರೋಧಿ ಅಭಿಯಾನ ಹಾಗು ಪ್ಲಾಸ್ಟಿಕ್ ನಿಷೇಧ ಜಾಗೃತಿ ಕಾರ್ಯಕ್ರಮ | ಶಾಲಾ ಮಕ್ಕಳು, ಶಿಕ್ಷಕರು ಮತ್ತು ಸಂಸ್ಥೆಯ ಸದಸ್ಯರು. | 300+ | ಸೇಕ್ರೆಡ್ ಹಾರ್ಟ್ ಪ್ರೌಢಶಾಲೆ. ರೆಸಿಡೆನ್ಸಿ ರಸ್ತೆ, ಬೆಂಗಳೂರು. | ಶಾಲಾ ಮಕ್ಕಳಿಗೆ ಕಸವಿರೋಧಿ ಅಭಿಯಾನದ ಮೂಲಕ ಪ್ಲಾಸ್ಟಿಕ್ ನಿಷೇಧದ ಬಗೆಗೆ ಅರಿವು ಮೂಡಿಸಲಾಯಿತು ಮತ್ತು ಇದರ ಕುರಿತ ಕರಪತ್ರಗಳನ್ನು ವಿತರಿಸಲಾಯಿತು. |
| 16 | 26/10/2019 | ಕಾವೇರಿ ನದಿ ತೀರ ಸ್ವಚ್ಛತಾ ಕಾರ್ಯಕ್ರಮ. | ಶಾಲಾ ಕಾಲೇಜು ಮಕ್ಕಳು, ಸರ್ಕಾರೇತರ ಸಂಸ್ಥೆಗಳು, ಸರ್ಕಾರಿ ಅಧಿಕಾರಿಗಳು ಹಾಗು ಸಾರ್ವಜನಿಕರು | 1000+ | ಕಾವೇರಿ ನದಿ ತೀರ ರಾಜಸೋಪಾನಕಟ್ಟೆ ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ | ನದಿ ತೀರದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಗಿಡ ನೆಡುವ ಕಾರ್ಯಕ್ರಮ, ರಸ್ತೆ ಜಾಥಾ ಹಾಗು ಬೀದಿನಾಟಕವನ್ನು ಆಯೋಜಿಸಲಾಗಿತ್ತು. ಸುಮಾರು 600 ಕಿಲೋಗ್ರಾಂನಷ್ಟು ತ್ಯಾಜ್ಯ ಸಂಗ್ರಹ ಮಾಡಿ ವಿಲೇವಾರಿಗಾಗಿ ಸ್ಥಳೀಯ ಮುನ್ಸಿಪಲ್ ಕೌನ್ಸಿಲ್ ಅವರಿಗೆ ನೀಡಲಾಯಿತು. |
| 17 | 22-02-2020 | ಸ್ವಚ್ಛ ಹಾಗು ಸ್ವಸ್ತ ಭಾರತಕ್ಕಾಗಿ ಸ್ವಚ್ಛ ಗಾಳಿ | ಶಾಲಾ ಮಕ್ಕಳು ಹಾಗು ಪನಿನೀಸಂಸಂ ಸಿಬ್ಬಂದಿ | 200+ | ಪ.ನಿ.ನೀ.ಸಂ.ಸಂ ದೊರೆಸಾನಿಪಾಳ್ಯ, ಬೆಂಗಳೂರು | ಶಾಲಾ ಮಕ್ಕಳನ್ನು ದೊರೆಸಾನಿಪಾಳ್ಯ ಅರಣ್ಯ ಪ್ರದೇಶಕ್ಕೆ ಕರೆದೊಯ್ದು ವಿವಿಧ ಜಾತಿಯ ಪಕ್ಷಿಗಳು ಹಾಗು ಗಿಡಗಳ ಪರಿಚಯ ನೀಡಲಾಯಿತು ಹಾಗು ಮಕ್ಕಳನ್ನು ನರ್ಸರಿಗೆ ಕರೆದೊಯ್ದು ಮಾಹಿತಿ ನೀಡಲಾಯಿತು. ಪರಿಸರ ಕುರಿತ ಸಾಕ್ಷ್ಯ ಚಿತ್ರಗಳನ್ನು ಪ್ರದರ್ಶಿಸಲಾಯಿತು ಹಾಗು ಚಿತ್ರಕಲೆ ಸ್ಪರ್ಧೆ ಏರ್ಪಡಿಸಿ ಬಹುಮಾನ ವಿತರಿಸಲಾಯಿತು. |

**ಅನುಬಂಧ 13: ರಾಷ್ಟ್ರೀಯ ಹಸಿರು ಪಡೆ ಅಡಿಯಲ್ಲಿನ ತರಬೇತಿ ಕಾರ್ಯಕ್ರಮಗಳು**

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದ ಅಭ್ಯರ್ಥಿಗಳು | ಅಭ್ಯರ್ಥಿಗಳ ಸಂಖ್ಯೆ | ಸ್ಥಳ | ವಿವರ |
|---|---|---|---|---|---|---|
| 1 | 21/08/ 2019 | ಉಪಗ್ರಹಾಧಾರಿತ ತರಬೇತಿ ಕಾರ್ಯಕ್ರಮ (ಸಾಟ್ಕಾಮ್ ತರಬೇತಿ) | ಪರಿಸರ ಕೂಟದ ಉಸ್ತುವಾರಿ ಶಿಕ್ಷಕರು | 3353 | (ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಂಸ್ಥೆ ( ಡಿ ಎಸ್ ಇ ಆರ್ ಟಿ) ಬೆಂಗಳೂರು | ರಾ.ಹ.ಪ ತಂಡವು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ರೂಪುರೇಷೆಗಳನ್ನು ತಿಳಿಸಲು ಈ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪ್ರಖ್ಯಾತ ಪರಿಸರವಾದಿಗಳು, ಲೇಖಕರೂ ಆದ ನಾಗೇಶ ಹೆಗಡೆಯವರು ಪರಿಸರ ಕೂಟದ ಚಟುವಟಿಕೆಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಿದರು. |
| 2 | 1/10/ 2019 | ರಾ.ಹ.ಪ ಜಿಲ್ಲಾ ನೋಡಲ್ ಅಧಿಕಾರಿಗಳ ಕಾರ್ಯಾಗಾರ | ರಾ.ಹ.ಪ ಜಿಲ್ಲಾ ನೋಡಲ್ ಅಧಿಕಾರಿಗಳು | 36+ | ಕುಮಾರಕೃಪ ಅತಿಥಿಗೃಹ, ಬೆಂಗಳೂರು | ರಾ.ಹ.ಪ ಕಾರ್ಯಕ್ರಮದ ಧ್ಯೇಯೋದ್ದೇಶಗಳ ಕುರಿತು ಮಾಹಿತಿ ನೀಡಲಾಯಿತು. ಶಾಲಾ ಮಟ್ಟದಲ್ಲಿ ಜಾರಿಗೆ ತರಬಹುದಾದ ನವೀನ ಚಟುವಟಿಕೆಗಳು ಹಾಗು ಯೋಜನೆಗಳ ಕುರಿತು ಚರ್ಚಿಸಲಾಯಿತು. 2019–20 ನೇ ಸಾಲಿನಲ್ಲಿ ರಾ.ಹ.ಪ ಯೋಜನೆಯನ್ನು ಉತ್ತಮವಾಗಿ ಅನುಷ್ಠಾನ ಮಾಡಲು ಚರ್ಚಿಸಲಾಯಿತು. |
| 3 | 30/12/2019 | ಜಿಲ್ಲಾ ಕಾರ್ಯಕ್ರಮ ಸಹಸಹಾಯಕರಿಗೆ ತರಬೇತಿ | ರಾ.ಹ.ಪ ಜಿಲ್ಲಾ ಕಾರ್ಯಕ್ರಮ ಸಹಸಹಾಯಕರು | 32+ | ಪನಿನೀಸಂಸಂ, ಜೆ ಪಿ ನಗರ ಬೆಂಗಳೂರು | ಪನಿನೀಸಂಸಂ ತಂಡವು ರಾ.ಹ.ಪ ಕಾರ್ಯಕ್ರಮದಡಿ ಶಾಲೆಗಳಲ್ಲಿ ಆಯೋಜಿಸಿ ಅನುಷ್ಠಾನಗೊಳಿಸಬಹುದಾದ ಚಟುವಟಿಕೆಗಳ ಕುರಿತು ಪ್ರಾತ್ಯಕ್ಷಿಕೆ ನೀಡಿತು. ಅಜಿಂ ಪ್ರೇಮ್ ಜಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಪರಿಸರ ಜಾಗೃತಿ ಮೂಡಿಸುವ ಕುರಿತು ಮಾತನಾಡಿದರು. |
| 4 | 3/01/2020 to 29/01/2020 | ಜಿಲ್ಲಾ ಹಾಗು ತಾಲ್ಲೂಕು ಮಟ್ಟದ ತರಬೇತಿ ಕಾರ್ಯಕ್ರಮಗಳು | ಪರಿಸರ ಕೂಟ ಉಸ್ತುವಾರಿ ಶಿಕ್ಷಕರು | 3805 | 34 ಶೈಕ್ಷಣಿಕ ಜಿಲ್ಲೆಗಳು | ಜಿಲ್ಲಾ ಹಾಗು ತಾಲ್ಲೂಕು ಹಂತದ ತರಬೇತಿಗಳಲ್ಲಿ ಈ ಕೆಳಗಿನ ವಿಷಯಗಳನ್ನಾಧರಿಸಿ ಪ್ರಾತ್ಯಕ್ಷಿಕೆ ನೀಡಲಾಯಿತು:<br>1. ರಾ.ಹ.ಪ ಚಟುವಟಿಕೆಗಳು<br>2. ಸ್ವಚ್ಛತಾ ಕ್ರಿಯಾ ಯೋಜನೆಯ ಕುರಿತು – ಘನ ತ್ಯಾಜ್ಯ ನಿರ್ವಹಣೆ ಮತ್ತು ಪ್ಲಾಸ್ಟಿಕ್ ನಿಷೇಧ ಕುರಿತು ಸ್ಥಳಿಯ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ಅಧಿಕಾರಿಗಳು/ಮಂಡಳಿಯಿಂದ ಗುರುತಿಸಿದ ನುರಿತರು ಮಾಹಿತಿ ನೀಡಿದರು.<br>3. ಅರಣ್ಯ ಇಲಾಖೆಯ ಅಧಿಕಾರಿಗಳು ಹವಾಮಾನ ಬದಲಾವಣೆಯಲ್ಲಿ ಅರಣ್ಯೀಕರಣ ಕುರಿತಂತೆ ಮಾಹಿತಿ ನೀಡಿದರು |

**ಅನುಬಂಧ 14: ರಾಷ್ಟ್ರೀಯ ಹಸಿರುಪಡೆ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾದ ಸಭೆಗಳು**

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದವರು | ಸ್ಥಳ | ವಿವರ |
|---|---|---|---|---|---|
| 1 | 19/08/2019 | ರಾಜ್ಯ ಸಂಚಾಲನ ಸಮಿತಿ ಸಭೆ | ರಾಜ್ಯ ಸಂಚಾಲನಾ ಸಮಿತಿ ಸದಸ್ಯರು | ಕೊಠಡಿ ಸಂಖ್ಯೆ 252, ಎಮ್ ಎಸ್ ಬಿಲ್ಡಿಂಗ್, ಬೆಂಗಳೂರು | ರಾಜ್ಯ ಸಂಚಾಲನಾ ಸಮಿತಿ ಸಭೆಯಲ್ಲಿ ಕಳೆದ ಸಭೆಯ ನಡಾವಳಿಗಳು ಮತ್ತು ಕೈಗೊಂಡ ಕಾರ್ಯಚಟುವಟಿಕೆಗಳ ವರದಿ ಪಡೆದು ಧೃಡೀಕರಿಸಲಾಯಿತು. ಸಭೆಯಲ್ಲಿ ಕಾರ್ಯಕ್ರಮದ ಪ್ರಗತಿ ವಿಮರ್ಶಿಸಲಾಯಿತು. 2019–20 ನೇ ಸಾಲಿನ ರಾ.ಹ.ಪ ಕಾರ್ಯಯೋಜನೆ ಮತ್ತು ಬಜೆಟ್ ಅನ್ನು ಅನುಮೋದಿಸಲಾಯಿತು. |
| 2 | 20/12/2019 to 21/12/2019 | ರಾಜ್ಯ ನೋಡಲ್ ಸಂಸ್ಥೆಗಳ ಪ್ರಥಮ ವಾರ್ಷಿಕ ಸಭೆ | ರಾಜ್ಯ ನೋಡಲ್ ಸಂಸ್ಥೆಗಳು | ಕೆವಡಿಯ, ಗುಜರಾತ್ | ಡಾ. ಕೆ ಎಚ್ ವಿನಯ್ ಕುಮಾರ್ ನಿರ್ದೇಶಕರು ಪನಿನೀಸಂಸಂ ಶ್ರೀ. ರಮೇಶ.ಸಿ ರಾ.ಹ.ಪ ನೋಡಲ್ ಅಧಿಕಾರಿಗಳು. ಸತ್ಯಶ್ರಿ ಕಾರ್ಯಕ್ರಮ ಅಧಿಕಾರಿಗಳು ರಾ.ಹ.ಪ. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪನಿನೀಸಂಸಂಯು ರಾ.ಹ.ಪ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ಅತ್ಯತ್ತಮ ನೋಡಲ್ ಸಂಸ್ಥೆ ಪ್ರಶಂಸನಾ ಪ್ರಶಸ್ತಿ ಪ್ರಶಸ್ತಿ ಸ್ವೀಕರಿಸಿತು. ಗದಗ ಜಿಲ್ಲೆಯ ಗೊಜನೂರು ಸರ್ಕಾರಿ ಪ್ರೌಢಶಾಲೆಯ ಪರಿಸರಕೂಟದ ಉಸ್ತುವಾರಿ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಬ್ಬರು ಅತ್ಯತ್ತಮ ಪರಿಸರಕೂಟ ಪ್ರಶಸ್ತಿ ಪಡೆದು ತಮ್ಮ ಶಾಲೆಯ ಇಕೋಕ್ಲಬ್ ಚಟುವಟಿಕೆಗಳ ಕುರಿತು ಪ್ರಮುಖ ಚಟುವಟಿಕೆಗಳ ಪ್ರದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ರಾ.ಹ.ಪ ತಂಡವು ಈ ಕಾರ್ಯಕ್ರಮದಡಿ ಕೈಗೊಳ್ಳಲಾದ ಪ್ರಮುಖ ಚಟುವಟಿಕೆಗಳನ್ನು ಪ್ರದರ್ಶಿಸಿತು. |
| 3 | 17/02 2020 | ಗ್ಲೋಬಲ್ ಲರ್ನಿಂಗ್ ಮತ್ತು ಅಬಸರ್ವೇಷನ್ ಟು ಬೆನಿಫಿಟ್ ಎನ್ವಿರಾನ್ಮೆಂಟ್ ಪ್ರೋಗ್ರಾಮ್ (ಗ್ಲೊಬ್) | ರಾಜ್ಯ ನೋಡಲ್ ಸಂಸ್ಥೆಗಳು | ಭೊಪಾಲ್, ಮಧ್ಯ ಪ್ರದೇಶ | ಡಾ. ಕೆ ಎಚ್ ವಿನಯ್ ಕುಮಾರ್, ನಿರ್ದೇಶಕರು, ಪನಿನೀಸಂಸಂ ಹಾಗು ರಾ.ಹ.ಪ ಕಾರ್ಯಕ್ರಮ ಸಂಯೋಜಕರಾದ ನಾಗೇಂದ್ರ ಪ್ರಸಾದ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಪನಿನೀಸಂಸಯು ಗ್ಲೋಬ್ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲಿದೆ. |
| | | | **ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ** | | |
| 4 | 16/12/2019 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ ರಾಮನಗರ | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |

| ಕ್ರ.ಸಂ | ದಿನಾಂಕ | ಚಟುವಟಿಕೆಯ ವಿವರ | ಭಾಗವಹಿಸಿದವರು | ಸ್ಥಳ | ವಿವರ |
|---|---|---|---|---|---|
| 5 | 31/12/2019 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ, ಗದಗ | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |
| 8 | 05/02/2020 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ, ಕೊಡಗು | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |
| 9 | 07/02/2020 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |
| 10 | 19/02/2020 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |
| 11 | 24/02/2020 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿ | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |
| 12 | 29/02/2020 | ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಮ್‌ಸಿ) | ಡಿಐಎಮ್‌ಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |

**ಅನುಬಂಧ 15: ರಾ.ಹಪ. ಶಾಲಾ ಭೇಟಿಗಳು**

| ಕ್ರ. ಸಂ. | ಜಿಲ್ಲೆಯ ಹೆಸರು | ಶಾಲಾ ಭೇಟಿ ಸಂಖ್ಯೆ |
|---|---|---|
| 1 | ಬಾಗಲಕೋಟೆ | 87 |
| 2 | ಬೆಂಗಳೂರು ಉತ್ತರ | 148 |
| 3 | ಬೆಂಗಳೂರು ಗ್ರಾಮೀಣ | 67 |
| 4 | ಬೆಂಗಳೂರು ದಕ್ಷಿಣ | 87 |
| 5 | ಬೆಳಗಾವಿ | 99 |
| 6 | ಬಳ್ಳಾರಿ | 181 |
| 7 | ಬೀದರ್ | 121 |
| 8 | ಬಿಜಾಪುರ | 120 |
| 9 | ಚಿಕ್ಕಬಳ್ಳಾಪುರ | 135 |
| 10 | ಚಾಮರಾಜನಗರ | 138 |
| 11 | ಚಿಕ್ಕೋಡಿ | 151 |
| 12 | ಚಿಕ್ಕಮಗಳೂರು | 143 |
| 13 | ಚಿತ್ರದುರ್ಗ | 204 |
| 14 | ದಕ್ಷಿಣ ಕನ್ನಡ | 15 |
| 15 | ದಾವಣಗೆರೆ | 102 |
| 16 | ಧಾರವಾಡ | 66 |
| 17 | ಗದಗ | 82 |

| ಕ್ರ.ಸಂ. | ಜಿಲ್ಲೆಯ ಹೆಸರು | ಶಾಲಾ ಭೇಟಿ ಸಂಖ್ಯೆ |
|---|---|---|
| 18 | ಗುಲ್ಬರ್ಗ | 102 |
| 19 | ಹಾಸನ | 110 |
| 20 | ಹಾವೇರಿ | 72 |
| 21 | ಕೊಡಗು | 142 |
| 22 | ಕೋಲಾರ | 111 |
| 23 | ಕೊಪ್ಪಳ | 115 |
| 24 | ಮಧುಗಿರಿ | 84 |
| 25 | ಮಂಡ್ಯ | 108 |
| 26 | ಮೈಸೂರು | - |
| 27 | ರಾಯಚೂರು | 52 |
| 28 | ರಾಮನಗರ | 145 |
| 29 | ಶಿವಮೊಗ್ಗ | 98 |
| 30 | ಶಿರಸಿ | 120 |
| 31 | ತುಮಕೂರು | 118 |
| 32 | ಉಡುಪಿ | 106 |
| 33 | ಉತ್ತರಕನ್ನಡ | 107 |
| 34 | ಯಾದಗಿರಿ | 106 |
| **ಒಟ್ಟು** | | 3696 |

**ಅನುಬಂಧ 16: 2019–20ನೇ ಸಾಲಿನಲ್ಲಿ ಪರಿಸರಕೂಟ ಶಾಲೆಗಳಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳು:**

| ವಿಭಾಗವಾರು ಜಿಲ್ಲೆಗಳ ಹೆಸರು | ಗಿಡ ನೆಡುವುದು | ಪರಿಸರ ದಿನಗಳ ಆಚರಣೆ | ಸ್ಪರ್ಧೆಗಳು | ಜಾಥಾ | ಮಳೆಕೊಯ್ಲು | ಜೈವಿಕ ಗೊಬ್ಬರ ತಯಾರಿಕೆ | ಕಸ ವಿಂಗಡಣೆ | ಪರಿಸರ ಹೊರ ಸಂಚಾರ | ಹಸಿರು ದೀಪಾವಳಿ |
|---|---|---|---|---|---|---|---|---|---|
| ಬೆಂಗಳೂರು ವಿಭಾಗ | | | | | | | | | |
| ಬೆಂಗಳೂರು ದಕ್ಷಿಣ | 100 | 100 | 100 | 100 | 20 | 10 | 30 | 50 | 10 |
| ಬೆಂಗಳೂರು ಗ್ರಾಮೀಣ | 90 | 95 | 90 | 100 | 50 | 50 | 60 | 35 | 85 |
| ಬೆಂಗಳೂರು ಉತ್ತರ | 95 | 95 | 100 | 95 | 45 | 10 | 35 | 40 | 10 |
| ಚಿತ್ರದುರ್ಗ | 95 | 90 | 95 | 40 | 50 | 35 | 50 | 30 | 10 |
| ದಾವಣಗೆರೆ | 95 | 90 | 90 | 50 | 40 | 50 | 30 | 35 | 40 |
| ಕೋಲಾರ | 100 | 100 | 95 | 95 | 85 | 25 | 25 | 15 | 15 |
| ಶಿವಮೊಗ್ಗ | 100 | 98 | 95 | 80 | 10 | 25 | 50 | 60 | 10 |
| ತುಮಕೂರು | 98 | 97 | 99 | 100 | 45 | 60 | 90 | 85 | 50 |
| ಮಧುಗಿರಿ | 95 | 95 | 90 | 80 | 40 | 40 | 50 | 15 | 20 |
| ರಾಮನಗರ | 100 | 100 | 100 | 100 | 5 | 60 | 30 | 85 | 5 |
| ಚಿಕ್ಕಬಳ್ಳಾಪುರ | 100 | 100 | 95 | 60 | 30 | 70 | 90 | 30 | 40 |
| ಮೈಸೂರು ವಿಭಾಗ | | | | | | | | | |
| ಚಿಕ್ಕಮಗಳೂರು | 95 | 100 | 100 | 95 | 0 | 10 | 10 | 100 | 7 |
| ಚಾಮರಾಜನಗರ | 100 | 95 | 85 | 80 | 80 | 35 | 40 | 10 | 15 |
| ಹಾಸನ | 95 | 100 | 95 | 50 | 20 | 80 | 50 | 30 | 5 |
| ಕೊಡಗು | 100 | 99 | 97 | 90 | 60 | 99 | 98 | 99 | 100 |
| ಮಂಡ್ಯ | 98 | 100 | 95 | 80 | 10 | 80 | 50 | 30 | 20 |
| ಉಡುಪಿ | 98 | 100 | 95 | 80 | 10 | 80 | 50 | 30 | 20 |
| ಕಲ್ಬುರ್ಗಿ ವಿಭಾಗ | | | | | | | | | |
| ಬಳ್ಳಾರಿ | 98 | 100 | 85 | 95 | 5 | 35 | 45 | 25 | 20 |

| | | | | | | | | | |
|---|---|---|---|---|---|---|---|---|---|
| ಬೀದರ್ | **85** | **80** | **90** | **85** | **10** | **5** | **50** | **20** | **20** |
| ಕಲ್ಬುರ್ಗಿ | **80** | **95** | **100** | **95** | **25** | **5** | **60** | **35** | **20** |
| ಕೊಪ್ಪಳ | **95** | **100** | **100** | **100** | **40** | **40** | **60** | **30** | **20** |
| ರಾಯಚೂರು | **95** | **100** | **95** | **80** | **40** | **10** | **50** | **10** | **15** |
| ಯಾದಗಿರಿ | **85** | **95** | **100** | **100** | **15** | **10** | **50** | **30** | **10** |
| **ಬೆಳಗಾವಿ ವಿಭಾಗ** | | | | | | | | | |
| ಬಾಗಲಕೋಟೆ | **80** | **100** | **75** | **90** | **15** | **40** | **70** | **60** | **5** |
| ಬೆಳಗಾವಿ | **95** | **100** | **90** | **40** | **50** | **80** | **90** | **40** | **80** |
| ಚಿಕ್ಕೋಡಿ | **80** | **100** | **100** | **100** | **10** | **35** | **60** | **50** | **10** |
| ಬಿಜಾಪುರ | **95** | **90** | **95** | **80** | **25** | **30** | **50** | **15** | **25** |
| ಧಾರವಾಡ | **100** | **100** | **95** | **100** | **20** | **40** | **60** | **60** | **20** |
| ಹಾವೇರಿ | **80** | **95** | **100** | **95** | **25** | **5** | **60** | **35** | **20** |
| ಗದಗ | **95** | **100** | **100** | **90** | **30** | **30** | **50** | **10** | **10** |
| ಉತ್ತರ ಕನ್ನಡ | **95** | **100** | **90** | **50** | **5** | **10** | **90** | **70** | **10** |
| ಶಿರಸಿ | **100** | **100** | **100** | **70** | **30** | **15** | **75** | **90** | **5** |